ಸಾಕ್ಷಿಯನ್ನು ದಿನಾಂಕಃ 24.07.2025 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಎಸ್.ಬಿ. ವಕೀಲರಿಂದಃ**

ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ಸರಳಗಿ ಗ್ರಾಮದ ಮ್ಯುಟೇಷನ್ ಎಂಟ್ರಿ ನಂಃ 816 ರ ಪ್ರತಿಯನ್ನು ನಿ.ಪಿ. 6 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಜಿ.ವಿ.ಬಿ. ವಕೀಲರಿಂದಃ**

ಸದ್ರಿ ನಿ.ಪಿ. 6 ರ ಮ್ಯುಟೇಷನ್ ಎಂಟ್ರಿ ನಂಬರನ್ನು ನನಗೆ ಹೇಳಲು ಆಗುವುದಿಲ್ಲ. ಸದ್ರಿ ದಾಖಲೆಯನ್ನು ನನ್ನ ಚಿಕ್ಕಪ್ಪನಾದ ಕೃಷ್ಣಪ್ಪರವರು ತೆಗೆಸಿಕೊಟ್ಟಿದ್ದಾರೆ ಎಂದರೆ ಸರಿ. ನಮ್ಮ ಚಿಕ್ಕಪ್ಪ ಕೃಷ್ಣಪ್ಪರವರು ತೀರಿಕೊಂಡು 5 ವರ್ಷಗಳಾಗಿವೆ. ಸದ್ರಿ ದಾಖಲೆಯನ್ನು ಈ ಹಿಂದೆ ನನಗೆ ಹಾಜರುಪಡಿಸಲು ತೊಂದರೆ ಇರಲಿಲ್ಲ, ಆದರೆ ನನಗೆ ಆ ಸಮಯದಲ್ಲಿ ಹಾಜರುಪಡಿಸಲು ಗೊತ್ತಾಗಲಿಲ್ಲ ಎಂಬುದಾಗಿ ಸಾಕ್ಷಿ ನುಡಿದಿದ್ದಾರೆ. ನಮ್ಮ ಜಮೀನು ನಮಗೆ ಸಿಗಲು ನಿ.ಪಿ. 6 ರ ದಾಖಲೆಯನ್ನು ಹಾಜರುಪಡಿಸಿದ್ದೇನೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

ಸಹಿ ಇದೆ/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.